ಆದರೆ, ನಿಶ್ಚಿಂತರಾಗಿರಿ. ನಮ್ ಹೆಣ್ಮಕ್ಳು ಸ್ಟ್ರಾಂಗು ಗುರು! ಅವರಿಗೆ ಇದೆಲ್ಲಕ್ಕಿಂತ ಅವರ ಸೌಂದರ್ಯ ಇಮ್ಮಡಿಸಿಕೊಳ್ಳೋದೇ ಧ್ಯೇಯವಾಗಿರುವಾಗ, ಅವರ ಹೃದಯ ಇದನ್ನೆಲ್ಲಾ ತಡೆದುಕೊಳ್ಳುತ್ತೆ. ಅಬ್ಬಬ್ಬಾ ಅಂದ್ರೆ, ಲಬ್‌ಡಬ್ ಅನ್ನೋದು ಒಂದೆರಡು ಬಾರಿ ತಪ್ಪಬಹುದು ಅಷ್ಟೆ!

ಆ ಪುಸ್ತಕದಲ್ಲಿ ಚಂದದ ಲಲನೆಯರ ತರಾವರಿ ಹೇರ್‌ಸ್ಟೈಲ್, ಹೇರ್ ಕಲರ್ ಮಿರಮಿರನೆ ಕಣ್ಣುಕುಕ್ಕುವಂತಿರುತ್ತದೆ. ಇಂಥ ಕೂದಲ ಸೌಂದರ್ಯವನ್ನು ತಮ್ಮದಾಗಿಸಿಕೊಂಡು ಮೆರೆವ ಹೆಣ್ಣಿನ ಮೇಲೆ ತಾನೇ ಈ ಮಸ್ತ್ ಹಾಡು ಕಟ್ಟಿರೋದು:

ಓಪನ್ ಹೇರು ಬಿಟ್ಕೊಂಡು
ಕೂದಲು ಹಾರಾಡಿಸ್ಕೊಂಡು
ಏರಿಯಾದಲ್ಲಿ ಓಡಾಡಬ್ಯಾಡ್ವೇ
ಜೀವ ಝಲ್ ಅಂತದೆ
ಬಾಡಿ ಜುಮ್ ಅಂತದೆ

ಇನ್ನು ಪುಸ್ತಕದ ಒಳಪುಟಗಳಲ್ಲಿ ಐಬ್ರೊ, ಅಪ್ಪರ್ ಲಿಪ್, ಚಿನ್, ಫೇಸ್ ಕ್ಲೀನ್ ಅಪ್, ಫೇಷಿಯಲ್, ಬಾಡಿ ಡೀ ಟ್ಯಾನ್, ಪೆಡಿಕ್ಯೂರ್, ಮೆನಿಕ್ಯೂರ್, ವ್ಯಾಕ್ಸಿಂಗ್, ಹೆಡ್ ಮಸಾಜ್, ಫುಲ್ ಬಾಡಿ ಮಸಾಜ್, ಹೇರ್ ಅಂಡ್ ಬಾಡಿ ಸ್ಪಾ... ಹೀಗೆ ಅವರ ಸರ್ವೀಸ್‌ನ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಫೇಷಿಯಲ್ ಮಾಡಿಸಿದರೆ ಐಬ್ರೋ ಫ್ರೀ, ಹೇರ್ ಸ್ಪಾ ಮಾಡ್ಸಿದ್ರೆ ಹೇರ್ ಕಟ್ ಫ್ರೀ, ಐದು ಸರ್ವೀಸ್ ತಗೊಂಡ್ರೆ ಎರಡು ಸರ್ವೀಸ್ ಫ್ರೀ – ಹೀಗೆ ಇನ್ನೂ ಏನೇನೋ. ಒಟ್ಟಿನಲ್ಲಿ ನೆತ್ತಿಯಿಂದ ಪಾದದವರೆಗೂ ಬ್ಯೂಟಿ ಟ್ರೀಟ್‌ಮೆಂಟ್ ದೊರೆಯುತ್ತದೆ.

ನಾನೊಮ್ಮೆ ಪಾರ್ಲರ್‌ಗೆ ಹೋದಾಗ ನನ್ನ ಪಕ್ಕದ ಸೀಟಿಗೆ ಮಧ್ಯವಯಸ್ಸಿನ ಮಹಿಳೆಯೊಬ್ಬರು ಬಂದು ಕುಳಿತರು. ಮರುದಿನದ ತಮ್ಮ ಮನೆಯ ಸಮಾರಂಭಕ್ಕೆ ಅದೇನೋ ಹೇರ್ ಸ್ಟೈಲ್ ಬೇಕೆಂದು ಹೇರ್‌ಸ್ಟೈಲಿಸ್ಟ್‌ಗೆ ವಿವರಿಸುತ್ತಿದ್ದರು. ಮರುಕ್ಷಣವೇ 'ಒಂದ್ನಿಮಿಷ ತಡೆಯಿರಿ' ಎಂದು ತನ್ನ ಗಂಡನಿಗೆ ಫೋನಾಯಿಸಿ, 'ರೀ, ಹೇರ್ ಕರ್ಲ್ ಮಾಡಿಸ್ಕೊಳ್ಳಲೋ ಅಥವ ಬರೀ ಬ್ಲೋ ಡ್ರೈ ಮಾಡಿಸ್ಕೊಳ್ಳಲೋ?' ಅಂತ ವಿಧೇಯಳಾಗಿ ಕೇಳಿದರು. ಇಂಥ ಸಣ್ಣ ವಿಷಯಕ್ಕೂ ಈ ಹೆಂಗಸು ತನ್ನ ಗಂಡನ ಅನುಮತಿ ಕೇಳುತ್ತಿದ್ದಾಳಲ್ಲಾ ಎಂದು ನನಗೆ ಆಶ್ಚರ್ಯವಾಯಿತು. ಗಂಡನ ಕಣ್ಣಿಗೆ ಸುಂದರವಾಗಿ ಕಾಣಲು ಇಂಥ ಪ್ರಶ್ನೆ ಕೇಳೋದು ಬೇರೆ. ಆದರೆ, ಈಕೆಗೆ ಸ್ವಯಂ ಇಚ್ಛೆಗಿಂತ ತನ್ನ ಗಂಡನ ನಿರ್ಧಾರವೇ ಮುಖ್ಯವಾಗಿತ್ತು. ಇದನ್ನು ನೋಡಿ, 'ಹೀಗೂ ಉಂಟೇ?' ಎಂದು ನನಗೆ ಆಶ್ಚರ್ಯವಾಯಿತು. ಮಗದೊಂದು ಕಡೆ ಒಬ್ಬ ಯುವತಿಯ ಕೇಶವಿನ್ಯಾಸ ಹಾಗೂ ಮೇಕಪ್ ಆದ ಮೇಲೆ, ಆಕೆಯ ಗಂಡ ವೈವಿಧ್ಯ ಕೋನಗಳಲ್ಲಿ ತನ್ನ ಮನದನ್ನೆಯ ಚಿತ್ರವನ್ನು ಮೊಬೈಲಿನಲ್ಲಿ ಸೆರೆಹಿಡಿದು ಅವರಿಬ್ಬರೂ ಹರ್ಷಿಸುತ್ತಿದ್ದುದ್ದನ್ನು ನೋಡಿ ಸಂತಸವಾಯಿತು.

ಮದುವೆ ಮುಂಜಿಗಳಲ್ಲಂತೂ ಪಾರ್ಲರ್‌ಗಳಿಗೆ ಸುಗ್ಗಿಯೋ ಸುಗ್ಗಿ. ಈ ಸಮಯದಲ್ಲೇ ಅವರು ಎಗ್ಗಿಲ್ಲದೆ ಕಮಾಯಿಸುವುದು. ಗ್ರಾಹಕರ ಬ್ಯೂಟಿಯನ್ನು ಇಮ್ಮಡಿಸಿಕೊಡುವುದೇ ಇವರ ಬಂಡವಾಳ. ವಧು–ವರರಿಂದ ಹಿಡಿದು ಅವರ ಮನೆಯವರೆಲ್ಲರಿಗೂ ಬಣ್ಣಗಳ ತಿಕ್ಕಾಟ, ತಿಣುಕಾಟ, ಕೇಶಾಲಂಕಾರ, ಸಾಥ್ ಸಾಥ್ ಮದರಂಗಿಯ ಓಕುಳಿಯಾಟ. ಕಪಲ್ ಆಫರ್ಸ್‌ನಲ್ಲಿ ಭಾರೀ ಡಿಸ್ಕೌಂಟ್ ಇರುವುದಾಗಿ ತಮ್ಮ ಪ್ಯಾಕೇಜ್‌ಗಳ ಭರಪೂರವನ್ನೇ ಸುರಿಸುತ್ತಾರೆ. ತಮ್ಮ ಕನಸಿನ ಮದುವೆಯಲ್ಲಿ ವಿಶೇಷವಾಗಿ ಚಂದ ಕಾಣಲು ಮದುಮಕ್ಕಳು ಬ್ರೈಡಲ್ ಪ್ಯಾಕೇಜಿಗೆ ಮೊರೆ ಹೋಗುವುದುಂಟು. **Head to toe** ಎರೆದು, ತಿಕ್ಕಿ, ತೊಳೆದು ಫಳಫಳ ಮಾಡಿಕೊಳ್ಳುವ ಭರದಲ್ಲಿ ಲಕ್ಷಗಟ್ಟಲೆ ಜೇಬಿನಿಂದ ಸೋರಿಹೋಗುವುದು. ಆದರೆ ಆ ಫಳಫಳ ಹೊಳಪಿಗೆ ಲೈಫ್ ಟೈಮ್ ಗ್ಯಾರಂಟೀ ಅಂತೂ ಇರಲ್ಲ.

ಹಿಂದೆಲ್ಲಾ ಅಮ್ಮ–ಅಜ್ಜಿಯರು, ಮಕ್ಕಳು ಮೊಮ್ಮಕ್ಕಳ ಮೈಕೈಗೆ ಭರಪೂರ ಎಣ್ಣೆ ತಿಕ್ಕಿ, ಬಿಸಿ ನೀರಿನ ಸ್ನಾನ ಮಾಡಿಸುತ್ತಿದ್ದರು. ಆದರೀಗ



ಅವೆಲ್ಲ ಹೇಳಹೆಸರಿಲ್ಲವಾಗಿ ಪಾರ್ಲರ್‌ಗಳೇ ಆ ಕೆಲಸಗಳ ಉಸ್ತುವಾರಿಯನ್ನೂ ತಗೊಂಡಿವೆ. ಈಗ ಸಣ್ಣಗಾಗಲೂ ಬಾಡಿ ಮಸಾಜ್ ಪಾರ್ಲರ್‌ಗಳಿರುವುದರಿಂದ, ಇಂದಿನ ಪೀಳಿಗೆಯವರು ಎಣ್ಣೆ, ಮತ್ಯಾವುದೋ ಆಯುರ್ವೇದಿಕ್ ಪುಡಿಗಳನ್ನು ಮೈಗೆಲ್ಲಾ ಧಾಳಾಗಿ ತಿಕ್ಕಿಸಿಕೊಂಡು, ಸ್ಟೀಮ್ ಬಾತ್ ಮಾಡಿಕೊಂಡು, ಕೇಜಿಗಟ್ಟಲೆ ತೂಕ ಕಡಿಮೆ ಮಾಡಿಕೊಳ್ಳುತ್ತಾರೋ ಇಲ್ಲವೋ, ಅವರ ಪರ್ಸ್ ಮಾತ್ರ ಸಪೂರಾಗುತ್ತೆ.

ಪಾರ್ಲರ್‌ಗಳ ಬಗ್ಗೆ ಹೆಚ್ಚಿಗೆ ಹೇಳೋದೇನಿದೆ ಅಂತ ಶುರುಮಾಡಿದ್ರೂ, ಈಗ ಎಷ್ಟೆಲ್ಲಾ ಪಾರ್ಲರಾಯಣದ ಪ್ರಸಂಗಗಳು ಬೆಳಿತಾನೇ ಹೋಗ್ತಿವೆ ನೋಡಿ. ನನ್ನದೇ ಒಂದು ಅನುಭವ ಕೇಳಿ. ನನ್ನ ಹಳೆಯದೊಂದು ಕಾಂಪ್ಲಿಮೆಂಟರಿ ಹೇರ್ ಕಟ್ ಸರ್ವೀಸ್ ಬಾಕಿ ಉಳಿದಿದ್ದರಿಂದ ಮತ್ತೊಮ್ಮೆ ಪಾರ್ಲರ್‌ಗೆ ಎಡತಾಕಬೇಕಾಯಿತು. ಬಿನ್ನಾಣದಿಂದ 'ಏನು ಸರ್ವೀಸ್ ಬೇಕಿತ್ತು ಮೇಡಮ್' ಎಂದು ಕೇಳಿದವಳು, ನಾನು 'ಕಾಂಪ್ಲಿಮೆಂಟರಿ ಸರ್ವೀಸ್ ಪೆಂಡಿಂಗ್ ಇತ್ತು' ಎಂದ ಕೂಡಲೇ ಅನಾಸಕ್ತಿಯಿಂದಲೇ 'ಬನ್ನಿ ಕೂತ್ಕೊಳ್ಳಿ' ಎಂದುಸುರಿದಳು. ಈ ಮೊದಲು ಕಿವಿಯಗಲ ನಗುತ್ತ ಸ್ವಾಗತಿಸಿದ್ದವಳು, ಇದೀಗ ಹರಳೆಣ್ಣೆ ಕುಡಿದಂತಿದ್ದಳು. ನನ್ನ ಕೂದಲ ತುದಿಯ ಮೊನಚು ಭಾಗವನ್ನು ಮಾತ್ರವೇ ಸರಿಮಾಡಬೇಕಿತ್ತು. ಉದ್ದ ಕೂದಲನ್ನು ಉಳಿಸಿಕೊಳ್ಳಬೇಕಿದ್ದರಿಂದ, 'ಕೂದಲ ಮೊನಚನ್ನು ಮಾತ್ರವೇ ಕತ್ತರಿಸಿ' ಎಂದು ಆಕೆ ಕತ್ತರಿ ಕೈಗೆತ್ತಿಕೊಳ್ಳುವ ಮುನ್ನ ಹತ್ತು ಬಾರಿಯಾದರೂ ಒರಲಿದ್ದೆ. ಕತ್ತರಿ ನನ್ನ ಕೂದಲ ಬಳಿ ಬರುತ್ತಿದ್ದ ಹಾಗೇ, ಏನೂ ಏರುಪೇರಾಗಬಾರದೆಂದು 'ಹುಷಾರು' ಎಂದು ಮತ್ತೆ ಎಚ್ಚರಿಸಿದ್ದೆ. ಕೊನೆಗೂ ಕೂದಲಿಗೆ ಕತ್ತರಿ ಬಿತ್ತು. ಕೆಳಗೆ ನೋಡಿದರೆ ನೆಲದ ಮೇಲೆ ನಾ ಹೇಳಿದಕ್ಕಿಂತಲೂ ಉದ್ದ ಕೂದಲು ಬಸವಳಿದು ಬಿದ್ದಿತ್ತು. ಕನ್ನಡಿಯಲ್ಲಿ ಮುಖ ನೋಡಿಕೊಂಡರೆ, ಇಲಿ ತಿಂದ ಗಿಡ್ಡ ಕೂದಲಾಗಿತ್ತು. ಕೋಪ, ದುಃಖ, ಹತಾಶೆ, ಎಲ್ಲವೂ ಒಮ್ಮೆಗೇ ಹುಟ್ಟಿಕೊಂಡಿತು. 'ಎಷ್ಟು ಹೇಳಿದರೂ ಇಷ್ಟೊಂದು ಕೂದಲು ಕತ್ತರಿಸಿದಿರಲ್ಲ, ಅದೂ ಅಡ್ಡಾದಿಡ್ಡಿಯಾಗಿ...' ಎಂದು ಒರಟಾಗಿಯೇ ಹೇಳಿದೆ. **'Don't worry madam,** ಒಂದು ವಾರದಲ್ಲಿ ಬೆಳೆದುಬಿಡುತ್ತೆ' ಎಂದು ಏನೂ ಆಗಿಲ್ಲವೆಂಬಂತೆ ಉಲಿದಳು ಆ ಬಿನ್ನಾಣಗಿತ್ತಿ. ಇನ್ನೂ ಅವಳ ಕೈಯಲ್ಲೇ ಇದ್ದ ಕತ್ತರಿಯನ್ನು ನೋಡಿ ಮತ್ತಷ್ಟು ಕಂಗಾಲಾದೆ. ಕಾಂಪ್ಲಿಮೆಂಟರಿ ಸರ್ವೀಸ್ ಅಂತ ಇಲಿ ಕಚ್ಚಿದ ಕೂದಲು ಮಾಡೋದೇ!

ಒಮ್ಮೊಮ್ಮೆ ನಾವು ಅಂದ್ಕೊಳ್ಳೋದೇ ಒಂದು, ಅಲ್ಲಿ ಆಗೋದೇ ಒಂದು. ಮನಸ್ಸಲ್ಲಿ ಇಂಥ ಒಂದು ಫೇಷಿಯಲ್ ಅಥವಾ ಹೇರ್‌ಕಟ್ ಬೇಕೆಂದು ಎಷ್ಟೇ ಗಟ್ಟಿ ನಿರ್ಧಾರ ಮಾಡಿ ಹೋಗಿದ್ದರೂ, ಅವರು ಕೊಡುವ ಸುದೀರ್ಘ ವಿವರಣೆಗೆ ಮಾರುಹೋಗಿ ಮತ್ಯಾವುದೋ ಹೇರ್‌ಕಟ್, ಫೇಷಿಯಲ್ ಮಾಡಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಬಹುತೇಕ ಬಾರಿ ತಮ್ಮ ಕೂದಲಿನ ಪ್ರಕಾರಕ್ಕೆ 'ಒಂದು ಒಳ್ಳೆಯ ಹೇರ್‌ಕಟ್‌ನ ನೀವೇ ಸೂಚಿಸಿ' ಎಂದು ಅವರ ಕತ್ತರಿಗೆ ಗ್ರಾಹಕರು ತಮ್ಮ ತಲೆ ಕೊಡುವುದುಂಟು. ಒಟ್ನಾಗೆ ಅವರ ಕತ್ತರಿಗೆ ನಮ್ ತಲೆನೂ ಕೊಡ್ತೇವೆ, ಜೇಬೂ ಕೊಡ್ತೇವೆ.

ಚಂದ ಕಾಣಲು ಹೆಣ್ಣುಮಕ್ಕಳು ಎಷ್ಟೆಲ್ಲಾ ಸಾಹಸ ಮಾಡುತ್ತಾರೆ ಅಂದರೆ ಆ ಹರನೇ ಕಾಪಾಡಬೇಕು. ಮುಖಾರವಿಂದ ಹೆಚ್ಚಿಸಿಕೊಳ್ಳಲು ಹೋಗಿ ಅನೇಕ ಬಾರಿ ಬ್ಯೂಟಿ ಪ್ರಾಡಕ್ಟ್‌ಗಳ ಅಡ್ಡ ಪರಿಣಾಮದಿಂದಲೋ ಅಥವಾ ಬ್ಯೂಟೀಷಿಯನ್ಸ್‌ರ ಅಚಾತುರ್ಯದಿಂದಲೋ ಕೆಲವೊಮ್ಮೆ ಗ್ರಾಹಕರ ಸೌಂದರ್ಯ ಸರಿಪಡಿಸಲಾಗದ ಮಟ್ಟಕ್ಕೆ ಹದಗೆಟ್ಟು ಕೋರ್ಟ್‌ನ ಮೊರೆಹೋಗಿರುವ ಪ್ರಸಂಗಗಳೂ ನಡೆದಿವೆ. ಪರಿಹಾರದ ರೂಪದಲ್ಲಿ ಹಣ ದಕ್ಕಿಸಿಕೊಂಡರೂ, ಇದ್ದ ಅಂದ ಮತ್ತೆ ಬರಲಾರದು. ಅದೇನೇ ಆದರೂ, ತೇರೇ ಬಿನ್ ಮೈ ಕೈಸೇ ಜೀಯೂ ಎಂದು ಪಾರ್ಲರ್ ಬಿಟ್ಟಿರಲಾರದ ನಮ್ ಹೆಣ್ಮಕ್ಕಳ ಎದೆಗಾರಿಕೆಗೆ ಒಂದು ಜೈಕಾರ ಹಾಕಲೇಬೇಕು.

ಪ್ರತಿಕ್ರಿಯಿಸಿ: **feedback@sudha.co.in**